ಕಾಲಕಳೆಯತೊಡಗಿದಂತೆ ಅದರೊಂದಿಗೆ ಒಗ್ಗಿಕೊಂಡು ಇರತೊಡಗಿದೆ. ನನ್ನ ಮನಸ್ಸಿನಾಶೆಗಳಿಗೆ ವಿರುದ್ಧವಾಗಿ ಇದೇ ಬದುಕೆನ್ನುವಂತೆ!

ನಿನಗೆ ಗೊತ್ತೇನು? ತುಸುತುಸುವೇ ಹೊರಗು ಪ್ರಪಂಚ ತಿಳಿಯುವ ವಯಸ್ಸಿನಲ್ಲಿ ಅಮ್ಮ, ಅಪ್ಪರ ಪ್ರೀತಿಗೆ ಅದೆಷ್ಟು ಮಾರುಹೋಗಿದ್ದೆನೆಂದರೆ – ನಾನು ಈಗಿರುವುದಕ್ಕಿಂತ ಮತ್ತೆಂದೂ ದೊಡ್ಡವಳಾಗುವುದು ಬೇಡ ಎನ್ನಿಸುತ್ತಿತ್ತು. ಅಕಸ್ಮಾತ್ ನಾನು ಬೆಳೆದುಬಿಟ್ಟರೆ ಮೊದಲಿನ ಅಚ್ಚೆ ದೊರೆಯದೆಂಬ ಭೀತಿ ಒಳಗೇ. ಆದರೆ ನನ್ನ ಬಯಕೆ ಮೀರಿ ನಾನು ಬೆಳೆದು ದೊಡ್ಡವಳಾಗಬೇಕಾಯ್ತು. ಬೆಳೆದಂತೆಲ್ಲ ಅಪ್ಪನ ಮಡಿಲಲ್ಲಿ ಮಲಗಿ ನಿದ್ರಿಸಿಬಿಡಬಹುದಾದ ಮಗುವಾಗಬೇಕೆನಿಸುತ್ತಿತ್ತು. ಅಮ್ಮ – ಅಪ್ಪ ಇಬ್ಬರೂ ನೀನು ಯಾವತ್ತೂ ನಮಗೆ ಮಗುವೇ ಎನ್ನುತ್ತಿದ್ದರಾದರೂ ನನ್ನಾಸೆಯಂತೇನೂ ನಾನು ಉಳಿಯಲಿಲ್ಲ. ಆದರೆ ನನಗೇ ಮಗುವಾಗುವ ಕಾಲವೊಂದು ಬಂತು. ಮತ್ತೆಂದೂ ಈ ಒಡಲು ತುಂಬದು ಎಂದುಕೊಂಡಿದ್ದ ನನಗೆ ಸಂತಸವಾಯಿತು. ಇದೇನೂ ತಿರಸ್ಕಾರದ ಕುಡಿಯಾಗಿರಲಿಲ್ಲ. ಸರಿದು ಹೋಗುವ ಕಾಲ ಏನೆಲ್ಲ ನೆನಪಿನ ಭಿತ್ತಿಯಲ್ಲಿ ಕೆತ್ತಿಹೋಗಿ ಬಿಡುತ್ತಾನೆ. ಇದು ಕೂಡ ಅವನ ನೆನಪಿನ ಬಳುವಳಿಯೇ – ಅಂದುಕೊಂಡೆ. ತುಂಬಿದೊಡಲನ್ನು ಸವರಿಕೊಂಡೆ. ನನ್ನ ಏಕಾಂತ ಕ್ಷಣಗಳನ್ನು ವೀಣೆ ಸ್ವರ ತುಂಬುತ್ತಿದ್ದರೆ, ಉಳಿದ ಸಮಯ ಬರಲಿರುವ ಮಗುವಿನ ಕುರಿತು ಕಲ್ಪಿಸುವುದರಲ್ಲಿ ಕಳೆಯಿತು...

★★★

ಕೆಲವು ತಿಂಗಳಿಗೇ ನನ್ನನ್ನು ಪೂರ್ಣ ಹೀರಿ ಹೊರಬಂದಿತು ಮಗು.

ಹಳೆಯದೆಲ್ಲ ದಹಿಸಿ ಹೊರಬಂದು ಹೊಸ ಬದುಕಿನ ಸಾಧ್ಯತೆ ತೋರಿದ ಅವನಿಗೆ ಹೆಸರಿಟ್ಟೆ – 'ಸರ್ವದಮನ!' ಈಗ ಇಷ್ಟು ದಿನ ಅದುಮಿಟ್ಟ ನನ್ನ ಅಂತರಂಗದ ಮಾತುಗಳಿಗೆ, ಕನಸುಗಳಿಗೆ ಆಕೃತಿ ಮೂಡತೊಡಗಿದವು. ನಾನು ಪೊಟ್ಟಾಗಿ ಆಡುವ ಮಾತುಗಳಿಗೆ ಹಲ್ಲಿಲ್ಲದ ಆ ಮಗು ಅರ್ಥವಾಗದಿದ್ದರೂ ಬಾಯಗಲಿಸಿ ನಕ್ಕು ಸ್ಪಂದಿಸುತ್ತಿತ್ತು. ಕೂತು ನಿಂತಲ್ಲಿ, ಒರಗಿ ಮಲಗಿದಲ್ಲಿ ಅಂಬೆಗಾಲಿಕ್ಕಿ ನನ್ನನ್ನು ಹುಡುಕಿ ಬರುತ್ತಿತ್ತು. ನನಗಾಗಿ ಅರಸುವ ಜೀವವೊಂದಿದೆಯೆಂದಾಗ ಎಷ್ಟು ಖುಷಿಯಾಗುತ್ತದೆ. ಅದರ ತಂದೆ ನನ್ನ ಪಾಡಿಗೆ ತಾವು ಲೀನವಾಗಿರುತ್ತಿದ್ದರು.

ವೀಣೆ ನುಡಿಸುವಾಗ, ಓದುವಾಗ, ಬರೆಯುವಾಗ ವಯಸ್ಸಿಗೆ ಮೀರಿದ ಗಂಭೀರತೆಯಲ್ಲಿ ಚಕ್ಕಲು–ಮಕ್ಕಲು ಹಾಕಿಕೊಂಡು ಕೂತು, ಚಪ್ಪಾಳೆ ತಟ್ಟಿ, ನಕ್ಕು ನನ್ನನ್ನು ಅನುಕರಿಸುತ್ತಿತ್ತು. ತೊದಲುತ್ತ ಅದಾಡುವ ಮಾತು, ನಡೆಯಲೆತ್ನಿಸಿ ಬಿದ್ದು ಅಳುತ್ತ ಆಸರೆಗಾಗಿ ಅಮ್ಮನನ್ನು ಬಯಸಿ, ಎತ್ತಿಕೊಂಡಾಗ ನಗುತ್ತಿದ್ದ ಅದರ ಪರಿಯಲ್ಲಿ ಮತ್ತೆ ದಿನಗಳು ಕಳೆದವು.

★★★

ಜಲಪಾತ ಬೀಳುತ್ತಲೇ ಸುನಯನ ಎದೆಗೆ ಕಟ್ಟಿದ ಕೈ ಕೆಳಗಿಳಿಬಿಟ್ಟು, ಜಲಪಾತಕ್ಕೆ ಇನ್ನೂ ಹತ್ತಿರ ಹೋಗಿ ಬೊಗಸೆಯಲ್ಲಿ ನೀರು ಹಿಡಿದು ಕುಡಿದಳು. ಅಲ್ಲೇ ಇದ್ದ ಬಂಡೆಗಾತು ನೀರಲ್ಲಿ ಕಾಲಿಳಿಬಿಟ್ಟಳು.

ಚೈತ್ರ – ಪಶ್ಚಿಮಕ್ಕೆ ಸುನಯನಳನ್ನು ನೋಡುತ್ತ ನಿಂತ. ಆಕೆ ಖುಷಿಯಲ್ಲಿ ನೀರಿನೊಂದಿಗೆ ಆಡುತ್ತಿರುವುದು ಕಂಡು; ನೀನೂ ಕೂಡ ಬುದ್ಧಿ ಬಲಿಯದ ಮಗು! ಎಂದುಕೊಂಡ. ಮಗುವಿಗೆ ನೀರಿನ, ಬೆಂಕಿಯ, ಭೂಕಂಪದ ಅಪಾಯದ ಅರಿವಿರುವುದಿಲ್ಲ ಹುಡುಗಿ – ಹಾಗೇ, ನಿನ್ನಂಥ ಮುದ್ದು ಹುಡುಗಿಯರಿಗೂ ಅಂದುಕೊಳ್ಳುತ್ತಲೇ ತಾನೂ ಆಕೆ ಕೂತ ಬಂಡೆಗಲ್ಲಿನ ಬಳಿ ಹೋಗಿ